ದಿನಾಂಕ 16-02-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರ ಶ್ರೀ ಬಿ.ವಿ.ಕೆ., ವಕೀಲರಿಂದಃ-

ನಾನು ವಿದ್ಯಾಭ್ಯಾಸ ಮಾಡಿಲ್ಲ. ಸಾಕ್ಷಿಗೆ ಅವರ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿರುವ ಸಹಿಗಳನ್ನು ತೋರಿಸಿ ನಿಮ್ಮದೇ ಸಹಿಗಳಾ ಎಂದರೆ ಸಾಕ್ಷಿಯು ನನ್ನದೇ ಎಂದು ನುಡಿದಿರುತ್ತಾರೆ. ನಾನು ವಿದ್ಯಾಭ್ಯಾಸ ಇಲ್ಲದಿದ್ದರೂ ಸಹಿ ಮಾಡುವುದನ್ನು ಕಲಿತಿದ್ದೇನೆ. ನನ್ನ ತಾತ ಕರಿಯಪ್ಪನಿಗೆ ನಾಲ್ಕು ಜನ ಗಂಡು ಮಕ್ಕಳು, ಆರು ಜನ ಹೆಣ್ಣು ಮಕ್ಕಳು. ಅವರೆಂದರೆ ಚಿಕ್ಕಹನುಮಯ್ಯ, ಹನುಮಂತಯ್ಯ, ರಂಗಯ್ಯ, ಹೊಂಬಯ್ಯ, ಸಂಜೀವಕ್ಕ, ಹನುಮಕ್ಕ, ವೆಂಕಟಲಕ್ಷ್ಮಕ್ಕ, ಹೊಂಬಮ್ಮ, ಮುನಿತಾಯಕ್ಕ, ಕೆಂಪಚನ್ನಕ್ಕ. ನನ್ನ ತಾತನ ಮರಣಾ ನಂತರ ಆತನ ನಾಲ್ಕು ಜನ ಗಂಡು ಮಕ್ಕಳು ಯಾವ ವರ್ಷ ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿಗೆ ಖಾತೆ ಯಾವ ವರ್ಷ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಆರ್.ಎ.661/2007-08ನ್ನು ಎ.ಸಿ.,ಯವರ ನ್ಯಾಯಾಲಯದ ಮುಂದೆ ನನ್ನ ತಂದೆಯ ಜಮೀನು ನನಗೂ ಬೇಕೆಂದು ಹಾಕಿದ್ದರು. ನಿಡಿ-23ರಲ್ಲಿ ಗಂಗಮ್ಮನವರ ಹೆಸರಿಗೆ ಸರ್ವೇ ನಂ.21/2ಎ ಎಂ.ಆರ್.1/2006-07ರಂತೆ ಖಾತೆಯಾಗಿತ್ತು ಎಂದು ನಮೂದು ಇದೆ ಎಂದರೆ ಇಲ್ಲ.

2. ಸರ್ವೇ ನಂ.34/45ರ 28 ಗುಂಟೆ (ದಾವಾ ಐಟಂ ನಂ.3) ನನ್ನ ತಂದೆಯ ಹೆಸರಿಗೆ ಸರ್ಕಾರದಿಂದ ಮಂಜೂರಾಗಿತ್ತು. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ನನ್ನ ತಂದೆ ಖಲೀಲ್ ಎಂಬುವವರಿಗೆ ಜಿ.ಪಿ.ಎ. ಮಾಡಿಕೊಟ್ಟಿದ್ದಾರೆ ಎಂದರೆ ಸುಳ್ಳು. ಸದರಿ ಜಿ.ಪಿ.ಎ. ಬರೆದುಕೊಟ್ಟಿದ್ದಕ್ಕೆ ಸದರಿ ಆಸ್ತಿಯನ್ನು ಸರ್ಕಾರದವರು ಮುಟ್ಟುಗೋಲು ಹಾಕಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಸದರಿ ಮುಟ್ಟುಗೋಲು ಆದೇಶವನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೇವೆ ಎಂದರೆ ಸರಿ. ಸರ್ವೇ ನಂ.1ರಲ್ಲಿ ಒಂದೂವರೆ ಗುಂಟೆ 2015-16ರವರೆಗೆ ನನ್ನ ತಂದೆಯ

ಹೆಸರಿನಲ್ಲೇ ಇತ್ತು ಎಂದರೆ ಸರಿ. ಸದರಿ ಸ್ವತ್ತಿನ ಖಾತೆಯನ್ನು 2ನೇ ಪ್ರತಿವಾದಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನಿಡಿ-14ರ ಪ್ರಕಾರ ದಿನಾಂಕ 25.10.2016ರಂದೇ 2ನೇ ಪ್ರತಿವಾದಿ ಸರ್ವೇ ನಂ.1ರಲ್ಲಿ ಒಂದೂವರೆ ಗುಂಟೆಯ ಖಾತೆಯನ್ನು ಎಂ.ಆರ್.ಹೆಚ್.8/2016-17ರಂತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನಿಪಿ-17ರಂತೆ ಎಂ.ಆರ್.1/2006-07ರಂತೆ ನಿಮ್ಮ ತಾಯಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸಾಕ್ಷಿಯು ನಮ್ಮ ತಾಯಿಯ ಹೆಸರಿಗೆ ಇದೆ, ಆದರೆ ನಾವು ಒಂದೊಂದು ಸರ್ವೇ ನಂಬರ್ ಉಳುಮೆ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

3. ದಾವಾ ಐಟಂ ನಂ.3ನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ಪಟ್ಟಾ ಜಮೀನುಗಳು ಎಂದರೆ ಸಾಕ್ಷಿಯು ಸರ್ವೇ ನಂ.26/ಪಿ3 ಸಹ ಮಂಜೂರಾದ ಜಮೀನು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ, ಉಳಿದ ಜಮೀನುಗಳೆಲ್ಲಾ ಪಟ್ಟಾ ಜಮೀನುಗಳು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1, 2, 4 ರಿಂದ 6 ನನ್ನ ತಂದೆಯ ಮರಣಾ ನಂತರ ನನ್ನ ತಾಯಿಯ ಹೆಸರಿಗೆ ಪೌತಿ ಖಾತೆ ಆಗಿವೆ ಎಂದರೆ ಸರಿ. ದಾವಾ ಐಟಂ ನಂ.1ರ ಖಾತೆಯನ್ನು ಯಾವ ಕಾರಣಕ್ಕೆ 2ನೇ ಪ್ರತಿವಾದಿಯ ಹೆಸರಿಗೆ ತಾಯಿಯ ಹೆಸರಿನಿಂದ ಬದಲಾವಣೆ ಮಾಡಿಸಿದ್ದೀರಿ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1ರ ಖಾತೆ ನನ್ನ ತಾಯಿಯ ಹೆಸರಿಗೆ ಆಗಿರಲಿಲ್ಲ, ನನ್ನ ತಂದೆಯ ಮರಣಾ ನಂತರ 2ನೇ ಪ್ರತಿವಾದಿ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ.

4. ನನ್ನ ತಂದೆ ತೀರಿಕೊಂಡು 20 ವರ್ಷಗಳಾಗಿರಬಹುದು. ಆ ಕಾಲಕ್ಕೆ ನನ್ನ ಮದುವೆಯಾಗಿತ್ತು. ನನ್ನ ತಂದೆ ತೀರಿಕೊಂಡ ಕಾಲಕ್ಕೆ 2 ಮತ್ತು 3ನೇ ವಾದಿಗಳ ತಂದೆ ಎಲ್ಲಿ ವಾಸವಿದ್ದರು ಎಂದರೆ ಸಾಕ್ಷಿಯು ನಮ್ಮ ತಂದೆ ಬೇರೆ ಮನೆ ಕಟ್ಟಿಸಿ ಕೊಟ್ಟಿದ್ದರು ಅಲ್ಲಿ ವಾಸವಿದ್ದರು ಎಂದು ನುಡಿಯುತ್ತಾರೆ. ನನ್ನ ಅಣ್ಣ ಹೊಂಬಯ್ಯರವರೇ ಹಿರಿಯ ಮಗ. ಅವರಿಗೆ ಯಾವ ಇಸವಿಯಲ್ಲಿ ಮದುವೆಯಾಯಿತು ಎಂದು ನನಗೆ ಗೊತ್ತಿಲ್ಲ. ಮದುವೆಯಾದ ಮೇಲೆ ನನ್ನ

ಅಣ್ಣ ಹೊಂಬಯ್ಯ ನನ್ನ ತಂದೆ, ತಾಯಿಯ ಜೊತೆ 10 ವರ್ಷಗಳ ಕಾಲ ವಾಸವಿದ್ದರು. ಮದುವೆಯಾದ 10 ವರ್ಷಕ್ಕೆ ಹೊಂಬಯ್ಯರವರು ಹೆಂಡತಿ, ಮಕ್ಕಳ ಜೊತೆ ಬೇರೆ ಹೊರಟು ಹೋದರಾ ಎಂದರೆ ಸಾಕ್ಷಿಯು ಸರ್ವೇ ನಂ.26/ಪಿ3ನ್ನು ಭಾಗ ತೆಗೆದುಕೊಂಡು ಬೇರೆ ಹೋದರು ಎಂದು ನುಡಿಯುತ್ತಾರೆ. ನಂತರ ದಾವಾ ಸ್ವತ್ತುಗಳಲ್ಲಿ ಹೊಂಬಯ್ಯ ಬಂದು ಉಳುಮೆ ಮಾಡುತ್ತಿದ್ದರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳನ್ನು ಯಾರು ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿಯು ರಂಗಸ್ವಾಮಿ, ಲಕ್ಷ್ಮಣ, ಕೃಷ್ಣ ಮತ್ತು ಕರೆಹನುಮಯ್ಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಎಲ್ಲಾ ದಾವಾ ಸ್ವತ್ತುಗಳ ಖಾತೆ ಈಗಲೂ ನಮ್ಮ ತಾಯಿಯ ಹೆಸರಿನಲ್ಲೇ ಇವೆ. ಪ್ರತಿವಾದಿ 4, 6, 8, 9ರವರಿಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೊಟ್ಟಿಲ್ಲವಾ ಎಂದರೆ ಸಾಕ್ಷಿಯು ಇನ್ನೂ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

5. ನಾನು, ಪ್ರತಿವಾದಿ 2, 3, 5ರವರು ಪ್ರತ್ಯೇಕವಾಗಿ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಮಾಡಿಕೊಂಡಿಲ್ಲ. ಸರ್ವೇ ನಂ.21/2ಎ ಮತ್ತು ಸರ್ವೇ ನಂ.22/2ಎ ರಲ್ಲಿ ಬೆಂಗಳೂರು-ಮೈಸೂರು ಹೆದ್ದಾರಿಗೆ ಎಷ್ಟು ವಿಸ್ತೀರ್ಣದ ಜಮೀನು ಭೂಸ್ವಾಧೀನಗೊಂಡಿದೆ, ಎಷ್ಟು ಉಳಿದಿದೆ ಎಂದು ಗೊತ್ತಿಲ್ಲ. ಸದರಿ ಸ್ವತ್ತುಗಳ ಭೂಸ್ವಾಧೀನದ ಪರಿಹಾರದ ಹಣವನ್ನು ಕೃಷ್ಣ, ಲಕ್ಷ್ಮಣ, ರಂಗಸ್ವಾಮಿ, ಕರೆಹನುಮಯ್ಯ, ರುದ್ರಮ್ಮ, ರತ್ನಮ್ಮ, ಭಾಗ್ಯಮ್ಮ, ಪ್ರೇಮ ಹಂಚಿಕೊಂಡಿದ್ದಾರೆ. ನಿಮ್ಮ ತಂದೆಯ ಮರಣಾ ನಂತರ ದಾವಾ ಸ್ವತ್ತುಗಳ ಸ್ವರೂಪವನ್ನು ಯಾವುದೇ ರೀತಿ ಬದಲಾವಣೆ ಮಾಡಿಸಿಲ್ಲ, ಹಾಗೆಯೇ ಮುಂದುವರೆದುಕೊಂಡು ಬಂದಿವೆ ಎಂದರೆ ಸರಿ. 1989-90ರಲ್ಲೇ ನಿಮ್ಮ ಅಣ್ಣ ಹೊಂಬಯ್ಯ ವಾಜರಹಳ್ಳಿಯಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಲು ಪ್ರಾರಂಭಿಸಿದರು ಎಂದರೆ ಸಾಕ್ಷಿಯು ನಮ್ಮ ತಂದೆ ಕಟ್ಟಿಸಿಕೊಟ್ಟರು ಎಂದು ನುಡಿಯುತ್ತಾರೆ. 1989-90 ರಿಂದ ಹೊಂಬಯ್ಯರವರು ದಾವಾ ಸ್ವತ್ತುಗಳ ಕಡೆ ಬಂದಿಲ್ಲ ಎಂದರೆ ಸರಿ. ಹೊಂಬಯ್ಯರವರು ವ್ಯವಸಾಯ ಮಾಡಿಕೊಂಡಿದ್ದರು. ಸರ್ವೇ ನಂ.26 ವಾಜರಹಳ್ಳಿ ಗ್ರಾಮದ ಜಮೀನು

ಗೋಮಾಳದ ಜಮೀನು ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.